# ಗುಂಡಿ ಕಂಡೀರಾ?

ದುರಂತಕ್ಕೆ ಮೊದಲಿನ ಅಲ್ಪವಿರಾಮದಂತೆ, ಕುರುಕ್ಷೇತ್ರದ ಕೊನೆಯಲ್ಲಿ ದುರ್ಯೋಧನ ವೈಶಂಪಾಯನ ಸರೋವರ ಪ್ರವೇಶಿಸುತ್ತಾನೆ. ಅಮ್ಮನ ಮಡಿಲಿನಂಥ ಕೊಳ ದುರ್ಯೋಧನನ ಪ್ರವೇಶದಿಂದ ಕವಿಯ ಕಣ್ಣಿನಲ್ಲಿ ಬೇರೆಯದೇ ಸ್ವರೂಪ ಪಡೆಯುತ್ತದೆ. ಪಾತಾಳ ಬಿಲಕ್ಕೆ ಬಾಗಿಲಿನಂತೆಯೂ, ಘೋರಾಂಧಕಾರಕ್ಕೆ ಮಾಡಿದ ಕೂಪದಂತೆಯೂ ದುರ್ಯೋಧನ ಅಡಗಿ ಕುಳಿತ ವೈಶಂಪಾಯನ ಸರೋವರವನ್ನು ಪಂಪ ಚಿತ್ರಿಸಿದ್ದಾನೆ. ಒಡಹುಟ್ಟುಗಳು ಹಾಗೂ ಬಂಧುಮಿತ್ರರನ್ನೆಲ್ಲ ಕಳೆದುಕೊಂಡು ಒಂಟಿಯಾದ ಕುರು ಸಾಮ್ರಾಟನ ಅಂತ್ಯ, ಅಧಃಪತನವನ್ನು ಬಹು ಮಾರ್ಮಿಕವಾಗಿ ಕಟ್ಟಿಕೊಡುವ ರೂಪಕಗಳಿವು. ವರ್ತಮಾನದಲ್ಲಿ ಈ ರೂಪಕಗಳನ್ನು ರಸ್ತೆಯ ಗುಂಡಿಗಳಿಗೆ ಅನ್ವಯಿಸಬಹುದೆ? ಗುಂಡಿಗಳನ್ನು ವೈಶಂಪಾಯನ ಸರೋವರದ ರೂಪದಲ್ಲಿ ಕಾಣಬಹುದಾದರೆ, ನಾವೆಲ್ಲರೂ ದುರಂತ ನಾಯಕನ ಪಾತ್ರಧಾರಿಗಳೆನ್ನಬಹುದೆ?

ವೈಶಂಪಾಯನ ಸರೋವರ ಹಾಗೂ ದುರ್ಯೋಧನನಿಗೆ ಇಂದಿನ ರಸ್ತೆಗುಂಡಿಗಳು ಹಾಗೂ ನಾವು ಪ್ರಮಾಣದಲ್ಲಿ ಸಾಟಿ ಆಗಲಾರೆವು. ಪಂಪವಾಕ್ಕಿನ ಅನ್ವಯವನ್ನು ಪರಿಣಾಮದಲ್ಲಿ ಕಾಣಬಹುದು. ರಸ್ತೆಗುಂಡಿಗಳು ಅದೆಷ್ಟು ಜನರಿಗೆ ಪಾತಾಳ ಕಾಣಿಸಿಲ್ಲ; ಮೃತ್ಯುವಿನ ಬಾಯಿಯಾಗಿ ಪರಿಣಮಿಸಿಲ್ಲ! ಅದೆಷ್ಟು ಜನರ 'ಊರುಭಂಗ'ಕ್ಕೆ ಕಾರಣವಾಗಿಲ್ಲ!

ದುರ್ಯೋಧನನ ಅವನತಿ ಸ್ವಯಂಕೃತವಾದುದು. ನೈತಿಕ ಅಧಃಪತನ ವ್ಯಕ್ತಿತ್ವದೊಂದಿಗೆ ಅಸ್ತಿತ್ವವನ್ನೂ ಬಲಿ ತೆಗೆದುಕೊಂಡಿತು. ಗಂಗೆ ಮಹಾಮಾಯಿ. ಮಾತ್ರ ಮಡಿಲಿನಂಥ ಸರೋವರ ಮೃತ್ಯುಮಡಿಲಾಗಿ ಕಾಣಲಿಕ್ಕೆ ಸುಯೋಧನನೇ ನಿಮಿತ್ತ. ಇಂದಿನ ರಸ್ತೆಗುಂಡಿಗಳನ್ನು ಸಮಷ್ಟಿಯ ನೈತಿಕ ಅಧಃಪತನದ ರೂಪದಲ್ಲಿ ನೋಡುವುದಾದರೆ, ನಾವೆಲ್ಲ ದುರ್ಯೋಧನ ಸಂತತಿಯೇ. ರಸ್ತೆಯ ವಿಕಾರಗಳಿಗೆ ಶಾಸಕಾಂಗ ಮತ್ತು ಕಾರ್ಯಾಂಗದ ವೈಫಲ್ಯವನ್ನು ಹೊಣೆ ಮಾಡಬಹುದಾದರೂ – ಪ್ರಭುತ್ವದ ಬೆನ್ನೆಲುಬು ಪ್ರಜೆಗಳೇ ಆದುದರಿಂದ, ಶಾಸಕಾಂಗ ಕಾರ್ಯಾಂಗದ ಕಲಂಕ ನಮ್ಮದೂ ಹೌದು. ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ನಿಟ್ಟುಸಿರುಬಿಡುವ ನಾವು, ನಮ್ಮ ಮೋರೆಗೂ ಕೈಗಳಿಗೂ ಮಸಿ ಹತ್ತಿರುವುದನ್ನು ಮರೆಯಬಾರದು. ಆ ಕಾರಣದಿಂದಲೇ ಪಂಪ ಕಾಣುವ, ಪಾತಾಳ ಬಿಲದಂಥ ವೈಶಂಪಾಯನ ಸರೋವರ ಹಾಗೂ ದುರ್ಯೋಧನನ ಅಧಃಪತನವನ್ನು ಈ ಹೊತ್ತಿನ ರಸ್ತೆಗುಂಡಿಗಳಲ್ಲಿ ಹಾಗೂ ಆ ಗುಂಡಿಗಳಿಗೆ ಒಡ್ಡಿಕೊಂಡಿರುವ ನಮ್ಮ ಬದುಕುಗಳಲ್ಲಿ ಕಾಣಬಹುದಾಗಿದೆ.

ಯುದ್ಧದಿಂದ ತುಸು ಬಿಡುವು ಪಡೆಯಲಿಕ್ಕಾಗಿ ದುರ್ಯೋಧನ ಅಡಗುತಾಣವನ್ನು ಹುಡುಕಿಕೊಂಡು ಹೋಗಬೇಕಾಯಿತು. ನಮಗೆ ಆ ಕಷ್ಟವೂ ಇಲ್ಲ. ಮನೆಯಿಂದ ಹೆಜ್ಜೆ ಹೊರಗಿಟ್ಟರೆ ಆಯಿತು – ಅಡಿಗಡಿಗೆ ಗುಂಡಿ. ಆ ಗುಂಡಿಗಳನ್ನು ದಾಟಿಕೊಂಡು ಗಮ್ಯವನ್ನು ಮುಟ್ಟುವ ನಮ್ಮ ಗುಂಡಿಗೆಗಳ ಕಸುವಿನ ಬಗ್ಗೆ ಮೂಕವಿಸ್ಮಿತರಾಗುವುದೋ, ಗುಂಡಿಗಳೆಂಬ ಕುರುಕ್ಷೇತ್ರವನ್ನು ಅನುದಿನವೂ ಹಾಯಬೇಕಾದ ಅನಿವಾರ್ಯತೆಯ ಬಗ್ಗೆ ಮಮ್ಮಲ ಮರುಗುವುದೋ? ಈ ಜಿಜ್ಞಾಸೆಯಲ್ಲೇ ಮತ್ತೊಂದು ಗುಂಡಿಯನ್ನು ದಾಟಬೇಕು.

'ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ' ಎನ್ನುತ್ತಾನೆ ಸರ್ವಜ್ಞ. 'ಗುಂಡಿಕಾಲ'ಕ್ಕೂ ಇದು ಸಲ್ಲುವ ಮಾತು. ಅಡಿಯ ಮುಂದಿಡೆ ಗುಂಡಿ! ಅದೃಷ್ಟ ಕೆಟ್ಟಿದ್ದರೆ, ಆ ಗುಂಡಿ ಮೃತ್ಯುವಿನ ಬಾಯಿಯಾಗಿ ಪರಿಣಮಿಸಿ, ಸ್ವರ್ಗ ಪ್ರಾಪ್ತಿ! ಅಡಿಯ ಹಿಂದಿಟ್ಟು ಅಥವಾ ಪಕ್ಕಕ್ಕಿಟ್ಟು ಬದುಕಿಕೊಂಡರೆ, ಗುಂಡಿ ದಾಟುತ್ತಲೇ ಇರಬೇಕಾದ ಅನುದಿನದ ನರಕ! ಸ್ವರ್ಗ–ನರಕದ ಲೆಕ್ಕಾಚಾರದಲ್ಲಿ ಅಡಿ ಮುಂದಿಡುವುದೋ ಹಿಂದಿಡುವುದೋ ಎನ್ನುವ ಎಂದಿಗೂ ಬಗೆಹರಿಯದ ದ್ವಂದ್ವವೇ ವರ್ತಮಾನದ ಬದುಕು. 'ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ? ಸಾಯೋ ತನಕ ಸಂಸಾರ್ದೊಳಗೆ ಗಂಡಾಗುಂಡಿ' ಎನ್ನುವ ಮೂಗೂರು ಮಲ್ಲಪ್ಪನವರ ಜೋಗದಗುಂಡಿಯ ಗೀತೆಯಲ್ಲಿನ ಲೆಕ್ಕಾಚಾರದ ಹಿಂದಿರುವುದು, ಜೀವನದ ಸಾರ್ಥಕತೆಗೂ ಗುಂಡಿಗೂ ಇರಬಹುದಾದ ನಂಟಿನ ಜಿಜ್ಞಾಸೆಯೇ ಆಗಿದೆ.

ರಸ್ತೆಗಳಲ್ಲಿನ ಗುಂಡಿಗಳು, ರಾಜಕಾರಣ ಹಾಗೂ ಸಾಮಾಜಿಕ ಅಧಃಪತನದ ಫಲಗಳು. ರಸ್ತೆಗಳನ್ನು ನಟಿಯರ ಕೆನ್ನೆಗಳಂತೆ ನುಣುಪುಗೊಳಿಸುತ್ತೇವೆ ಎಂದು ರಾಜಕಾರಣಿಗಳು ಆಶ್ವಾಸನೆ ಕೊಡುತ್ತಾರೆ. ರಸ್ತೆಗಳೆಲ್ಲ ನಟಿಯರ ಕೆನ್ನೆಗಳಾದರೆ ಜಾರಬಹುದೆನ್ನುವ ಭಯದಿಂದಲೋ ಏನೋ, ಗುಂಡಿಗಳನ್ನು ಯಥಾಸ್ಥಿತಿಯಲ್ಲಿ ಉಳಿಸುತ್ತಾರೆ. ಗುಂಡಿಯೆನ್ನುವುದು ಈ ನೆಲದ ಬದಲಾಗದ ವಾಸ್ತವ ಎನ್ನುವ ಅರಿವಿನಿಂದಲೋ ಏನೋ, ಪ್ರಶ್ನಿಸಬೇಕಾದವರು ತಮ್ಮ ಮಾತುಗಳನ್ನೆಲ್ಲ ಗುಂಡಿಗೆ ಸುರಿದಿದ್ದಾರೆ.

ಸಮಾಜ ಇಲ್ಲವೇ ರಾಜಕಾರಣದಲ್ಲಿನ ನೈತಿಕತೆಯ ಕೊರತೆಯನ್ನು ಬಿಂಬಿಸುವಂತಿರುವ ಗುಂಡಿಗಳನ್ನು ಆಧ್ಯಾತ್ಮಿಕ ನೆಲೆಗಟ್ಟಿನಲ್ಲೂ ನೋಡಬಹುದು. ಗುಂಡಿ ಭೌತಿಕವಾದುದಷ್ಟೇ ಅಲ್ಲ, ಅಂತರಂಗಕ್ಕೆ ಸಂಬಂಧಿಸಿದ್ದೂ ಹೌದು. ಚಂದ್ರನಲ್ಲೂ ಕುಳಿಗಳಿವೆ. ಡೊಗರು, ಕೊರಕಲು ಪ್ರಕೃತಿಯ ಭಾಗವೇ ಆಗಿದೆ. 'ಕಪ್ಪು ಕುಳಿ' ಎನ್ನುವ ವಿಶ್ವರಹಸ್ಯವನ್ನು ವಿಜ್ಞಾನವೂ ಒಪ್ಪಿಕೊಂಡಿದೆ. ಹೀಗೆ ಸರ್ವಾಂತರ್ಯಾಮಿಯಾದ ಕುಳಿಗಳನ್ನು, ರಸ್ತೆಗಳಿಂದ ಮುಕ್ತಗೊಳಿಸಲು ಸಾಧ್ಯವೆ? ಆ ಚಿಂತನೆ ಸಾಧುವೇ? ಈ ಸತ್ಯವನ್ನು ಅರಿಯದೆ, ರಸ್ತೆಗಳನ್ನು ಗುಂಡಿಮುಕ್ತಗೊಳಿಸುತ್ತೇವೆ ಎಂದು ಕಾರ್ಯಾಂಗ ಹೇಳುತ್ತಲೇ ಇರುತ್ತದೆ.

ಸೂಕ್ಷ್ಮವಾಗಿ ನೋಡಿದರೆ, ಗುಂಡಿ ಎನ್ನುವುದು ಮನುಷ್ಯನ 'ಸ್ವಭಾವಚಿತ್ರ' (ಕ್ಯಾರಿಕೇಚರ್) ಅಲ್ಲದೆ ಬೇರೆಯೇನೂ ಅಲ್ಲ. ಈ ತಿಳಿವನ್ನು ಜಗಕ್ಕೆಲ್ಲ ಹಂಚುವ ಉದ್ದೇಶದಿಂದಲೋ ಏನೋ, ಕಲಾವಿದ ಬಾದಲ್ ನಂಜುಂಡಸ್ವಾಮಿ ಅವರು ರಸ್ತೆಗುಂಡಿಗಳಿಗೆ ಮನುಷ್ಯ ಮುಖದ ಚಹರೆಗಳನ್ನು ಚಿತ್ರಿಸಿ, ಗುಂಡಿಗಳನ್ನು ಕಲಾತ್ಮಕಗೊಳಿಸಿದರು ಹಾಗೂ ಗುಂಡಿಗಳ ವಿಶ್ವಾತ್ಮಕತೆಯ ಕುರಿತು ಸಹೃದಯರ ಗಮನಸೆಳೆದರು.

ಯಂತ್ರವನ್ನು ಸಕ್ರಿಯ ಹಾಗೂ ನಿಷ್ಕ್ರಿಯಗೊಳಿಸುವ ಒತ್ತುಗುಂಡಿಯೂ ಇದೆ. ಹಸಿರು ಹಾಗೂ ಕೆಂಪು ಬಣ್ಣದ ಈ ಗುಂಡಿಗಳು ನಮ್ಮ ಬದುಕಿನ ಕ್ರಿಯಾಶೀಲತೆ ಇಲ್ಲವೇ ನಿಷ್ಕ್ರಿಯತೆಯ ಸಂಕೇತಗಳು. ಬದುಕೇ ಒಂದು ಯಂತ್ರವಲ್ಲವೇ? ಈ ಯಂತ್ರಕ್ಕೆ ಎಷ್ಟೊಂದು ಗುಂಡಿಗಳು! ಬಾಲ್ಯದಿಂದ ಮುಪ್ಪಿನವರೆಗೂ ಒಂದಲ್ಲಾ ಒಂದು ಗುಂಡಿ ನಮ್ಮನ್ನು ನಿಯಂತ್ರಣದಲ್ಲಿ ಇರಿಸಿಕೊಂಡೇ ಇರುತ್ತದೆ. ಒಂದರ ಹಿಡಿತವನ್ನು ಮೀರಲಿಕ್ಕೆ ಹಂಬಲಿಸುತ್ತ, ಮತ್ತೊಂದು ಗುಂಡಿಯ ಹಿಡಿತಕ್ಕೆ ಒಪ್ಪಿಸಿಕೊಳ್ಳುತ್ತ, ಗುಂಡಿಯಿಂದ ಗುಂಡಿಗೆ ಜಿಗಿಯುತ್ತಿರುತ್ತೇವೆ. ಯಾವುದೋ ಕ್ಷಣ ಎಲ್ಲ ಗುಂಡಿಗಳನ್ನೂ ಮೀರುತ್ತೇವೆ. ಗುಂಡಿ ತಪ್ಪಿದ ಕ್ಷಣವೇ ಗುಣಿ!

**■ ಚಂಪಕಮಾಲಾ**

## ಮಾತೇ ಮುತ್ತು

- ಜನ ನಡೆದಿದ್ದಾರೆ ಎಂದು ಸವೆದ ಹಾದಿಯಲ್ಲಿ ಹೋಗದಿರಿ, ನಿಮ್ಮದೇ ಹೊಸಹಾದಿಯನ್ನು ಸೃಷ್ಟಿಸಿಕೊಂಡು ಮುನ್ನಡೆಯಿರಿ.
  
  –ಗೌತಮ ಬುದ್ಧ
- ನೀತಿಯ ನೆಲೆಗಟ್ಟಿಲ್ಲದ ವಾದವು ಮಾತಿನ ವ್ಯಭಿಚಾರ.
  
  –ಎಸ್.ಎಲ್. ಭೈರಪ್ಪ
- ಪುಸ್ತಕಗಳು ಪ್ರತಿಯೊಬ್ಬರ ಮನಸ್ಸಿಗೂ ಪರಾಗವನ್ನು ಹೊತ್ತೊಯ್ಯುವ ದುಂಬಿಗಳು.
  
  –ಜೇಮ್ಸ್ ರಸೆಲ್
- ಪರಿಪೂರ್ಣ ಮಹಿಳೆಯ ಪರಿಕಲ್ಪನೆ ಪರಿಪೂರ್ಣ ಸ್ವಾತಂತ್ರ್ಯ.
  
  –ವಿವೇಕಾನಂದ
- ಒಂದು ತಾಸು ಓದಿದರೆ ಎರಡು ತಾಸು ದುಡಿಯಿರಿ, ಮೂರು ತಾಸು ವಿಚಾರ ಮಾಡಿ.
  
  –ರಾಮಕೃಷ್ಣ ಪರಮಹಂಸ
- ಸೋತವನಿಗೆ ಮಾತ್ರ ಗೆಲುವಿನ ಅವಕಾಶವಿರುತ್ತದೆ.
  
  –ದ.ರಾ. ಬೇಂದ್ರೆ
- ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು?
  
  –ಬಸವಣ್ಣ